ಸ್ವಾತಂತ್ರ್ಯದ ಅಮೃತಮಹೋತ್ಸವ

ಕರ್ನಾಟಕ ಸರ್ಕಾರ

# ಸಾಮಾಜಿಕವಾಗಿ ಸುರಕ್ಷಿತವಾಗಿರುವ ಗ್ರಾಮ

Socially Secured Village

# ಸಾಮಾಜಿಕವಾಗಿ ಸುರಕ್ಷಿತವಾಗಿರುವ ಗ್ರಾಮ - ಪರಿಚಯ

ಭಾರತ ಹಳ್ಳಿಗಳಿಂದ ಕೂಡಿರುವ ದೇಶ ಪ್ರಸ್ತುತ ಭಾರತದಲ್ಲಿ ಶೇ68ರಷ್ಟು ಮತ್ತು ಕರ್ನಾಟಕದಲ್ಲಿ ಶೇ62 ರಷ್ಟು ಜನ ಗ್ರಾಮೀಣಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿಯೇ ಮಹಾತ್ಮಗಾಂಧಿಜಿಯವರು **"ಭಾರತದೇಶದ ಆತ್ಮ ಹಳ್ಳಗಳಲ್ಲಿ ಅಡಗಿದೆ"** ಎಂದುಹೇಳಿದ್ದರು ಅಂದರೆ ಹಳ್ಳಿಗಳ ಅಭಿವೃದ್ಧಿಯಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಹೇಳಿದ್ದರು ಹಾಗೆಯೇ ಗ್ರಾಮಸ್ವರಾಜ್ಯದ ಕನಸುಕಂಡಿದ್ದರು. ಸ್ವಾತಂತ್ರ್ಯನಂತರಗಾಂಧಿಜಿಯವರ ಗ್ರಾಮಸ್ವರಾಜ್ಯದ ಕನಸನ್ನು ನನಸುಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆತಂದವು ಅದರು ಸಹ ಗ್ರಾಮಗಳ ಅಭಿವೃದ್ಧಿ ನಿರೀಕ್ಷಿತಮಟ್ಟದಲ್ಲಿ ಅಗಿಲ್ಲ. ನಾವು ಪ್ರಸ್ತುತ **75**ನೇ ಸ್ವಾತಂತ್ರ್ಯದ ಅಮೃತಮಹೋತ್ಸವ ಸಂಭ್ರಮದಲ್ಲಿದ್ದೆವೆ. 2030 ರ ವೇಳೇಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಹೊರಟಿದ್ದೆವೆ. ಇದಕ್ಕೆ ಪೂರಕವಾಗಿ ಕೇಂದ್ರಸರ್ಕಾರ ಸುಸ್ಥಿರ ಅಭಿವೃದ್ಧಿಯ 17ಗುರಿಗಳನ್ನು ಸ್ಥಳೀಕರಣಗೊಳಿಸಿ 9 ಗುರಿಗಳನ್ನು ನಿಗದಿಪಡಿಸಿದೆ. ರಾಜ್ಯಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ **8** ವಲಯಗಳನ್ನು ಗುರುತಿಸಿದ್ದು ಈ ವಲಯಗಳಲ್ಲಿ ಸಾಮಾಜಿಕವಾಗಿ ಸುರಕ್ಷಿತವಾಗಿರುವ ಗ್ರಾಮವು ಒಂದು ಹಾಗಾಗಿ ಗ್ರಾಮಪಂಚಾಯಿತಿ ದೂರದೃಷ್ಟಿಯೋಜನೆ ಸಿದ್ಧಪಡಿಸುವಾಗ ಸಾಮಾಜಿಕವಾಗಿ ಸುರಕ್ಷಿತವಾಗಿರುವ ಗ್ರಾಮವನ್ನಾಗಿ ಮಾಡಲು ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಯೋಜನೆಯನ್ನು ರೂಪಿಸಬೇಕಾಗಿದೆ.

ಸಾಮಾಜಿಕವಾಗಿ ಸುರಕ್ಷಿತ ಗ್ರಾಮ ಎಂದರೆ ಗ್ರಾಮೀಣಪ್ರದೇಶದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ರಕ್ಷಣೆ ನೀಡುವುದು ಮತ್ತು ಸಾಮಾಜಿಕ ಭದ್ರತಾಯೋಜನೆಗಳ ವ್ಯಾಪ್ತಿಗೆ ಒಳಪಡುವ ಎಲ್ಲಾ ಅರ್ಹರಿಗೂ ಸಾಮಾಜಿಕಭದ್ರತೆಯನ್ನು ಒದಗಿಸುವುದು. ಈ ನಿಟ್ಟಿನಲ್ಲಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಬಹಳಮುಖ್ಯವಾಗಿ ಸಾಮಾಜಿಕ ಭದ್ರತಾ ಯೋಜನೆಗಳನ್ನು ಹಿರಿಯನಾಗರೀಕರು, ವಯೋವೃದ್ದರು, ವಿಶೇಷಚೇತನರು, ಮಾನಸಿಕ ವಿಶೇಷಚೇತನರು, ವಿದವೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಇವರುಗಳಿಗೆ ಮಾಸಿಕವಾಗಿ ಪಿಂಚಣಿ ರೂಪದಲ್ಲಿ ಹಣಕಾಸಿನ ನೆರವನ್ನು ನೀಡುತ್ತಿದೆ. ಹಾಗಯೇ ಗ್ರಾಮೀಣಪ್ರದೇಶದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಸಾಮಾಜಿಕವಾಗಿ ರಕ್ಷಣೆ ನೀಡುವಜೊತೆಗೆ ಅವರ ಜೀವನಮಟ್ಟವನ್ನು ಸುಧಾರಿಸಲು ವಿವಿಧ ಇಲಾಖೆಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನುನೀಡುತ್ತಬಂದಿದೆ ಅವುಗಳೆಂದರೆ.

ಗ್ರಾ&ಪಂರಾಸಂ

- ಬಡತನ ನಿರ್ಮೂಲನ ಕಾರ್ಯಕ್ರಮಗಳು
- ಕೃಷಿ, ಪಶು ಸಂಗೋಪಣೆ, ಮಿನುಗಾರಿಗೆ ಮತ್ತು ಸಣ್ಣಕೈ ಗಾರಿಕೆಗಳ ಸ್ಥಾಪನೆಗೆ ಹಣಕಾಸಿನ ಬೆಂಬಲ ನೀಡುವ ಮೂಲಕ ಜೀವನೋಪಾಯ ಒದಗಿಸುವುದು.
- ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾರಿಗೂ ಗುಣಮಟ್ಟದ ಶಿಕ್ಷಣ ನೀಡುವುದು.
- ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ನೀಡುವುದು.

- ವಸತಿ ರಹಿತರಿಗೆ ವಿವಿಧ ವಸತಿ ಯೋಜನೆಗಳಿಂದ ವಸತಿ ವ್ಯವಸ್ಥೆಕಲ್ಪಿಸುವುದು.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ಗರ್ಭಿಣಿಯರಿಗೆ, ನವಜಾತಶಿಶುಗಳು ಮತ್ತು ತಾಯಂದಿರಿಗೆ ಆರೋಗ್ಯ ತಪಾಸಣೆ.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗರ್ಭಿಣಿಯರಿಗೆ, ಮಕ್ಕಳು ಮತ್ತು ತಾಯಂದಿರಿಗೆ ಪೂರಕಪೌಷ್ಠಿಕ ಆಹಾರ ಒದಗಿಸುವುದು.
- ಸಮಾಜಕಲ್ಯಾಣ ಇಲಾಖೆಯ ಮೂಲಕ ಪ.ಜಾ/ಪ.ಪಂ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ
- ಕಂದಾಯ ಇಲಾಖೆ ಮತ್ತು ವಿಶೇಷಚೇತನರು ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಮೂಲಕ ಹಿರಿಯ ನಾಗರೀಕರು, ವಯೋವೃದ್ದರು, ವಿಶೆಷಚೇತನರು, ಬುದ್ಧಿಮಾಂದ್ಯರು ಮತ್ತು ವಿದವೆಯರುಗಳಿಗೆ ಸಾಮಾಜಿಕ ಭದ್ರತಾಯೋಜನೆಯ ಸೌಲಭ್ಯಗಳನ್ನು ಒದಗಿಸುವುದು.
- ಹೊಬಳಿಮಟ್ಟದಲ್ಲಿ ಪೊಲೀಸ್ಠಾಣೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣಪ್ರ ದೇಶಗಳಲ್ಲಿ ಅಪರಾಧಗಳನ್ನು ಕಡಿಮೆಮಾಡುವುದು ಮತ್ತು ಶಾಂತಿ ಸೌರ್ದತೆಯನ್ನು ಕಾಪಾಡುವುದು

ಈ ಮೇಲಿನ ಎಲ್ಲಾ ಕಾರ್ಯಕ್ರಮಳನ್ನು ಅರ್ಹಫಲನುಭವಿಗಳಿಗೆ ತಲುಪಿಸಲು ಸ್ಥಳೀಯ ಸರ್ಕಾರಗಳ ಪಾತ್ರಬಹಳಮುಖ್ಯ ವಾಗಿರುತ್ತದೆ. ಈ ನಿಟ್ಟಿನಲ್ಲಿ1993 ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ಮಾಡುವ ಮೂಲಕ ಮೂರು ಹಂತದ ಪಂಚಾಯತ್ರಾಜ್ಯ ವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ನಿಟ್ಟಿನಲ್ಲಿ ಗ್ರಾಮಪಂಚಾಯಿತಿ ಮತ್ತು ಗ್ರಾಮಸಭೆಗೆ ವಿಶೇಷ ಅಧಿಕಾರವನ್ನು ನೀಡಲಾಗಿದ್ದು ಗ್ರಾಮಗಳನ್ನು ಸಾಮಾಜಿಕವಾಗಿ ಸುರಕ್ಷಿತವಾಗಿಸುವ ಜವಾಬ್ದಾರಿಸ್ಥಳೀಯ ಸರ್ಕಾರದ ಮೇಲಿದೆ.

ಗ್ರಾಮಗಳನ್ನು ಸಾಮಾಜಿಕ ಸುರಕ್ಷಿತವನ್ನಾಗಿ ಮಾಡುವನಿಟ್ಟಿನಲ್ಲಿ ಅಲ್ಲಿರುವ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಿಪಟ್ಟಿ ಮಾಡಿ ಅವುಗಳನ್ನು ಕೇಂದ್ರಿಕೃತ ಗುಂಪುಚರ್ಚೆ ಮತ್ತು ಗ್ರಾಮೀಣ ಸಹಬಾಗೀಪರಾಮರ್ಶೆಯ ಮೂಲಕ ಮಾಡಬಹುದಾಗಿದೆ. ಸದರಿ ಸಮಸ್ಯೆಗಳನ್ನು ಸಂಗ್ರಹಿಸಿ ವಿವರಣಾತ್ಮಕವಾಗಿ ವಿಶ್ಲೇಷಿಸಿ ವರದಿಯನ್ನು ಸಿದ್ಧಪಡಿಸುವುದು.ಸಂಬಂಧಿಸಿದ ಇಲಾಖೆಗಳಿಂದ ಸಂಗ್ರಹಿಸಿರುವ ದ್ವಿತೀಯ ದತ್ತಾಂಶವನ್ನು ಆಧಾರಿಸಿ ವಾಸ್ತವಸ್ಥಿತಿಯ ವಿಶ್ಲೇಷಣೆ ಮಾಡುವುದು ಹಾಗೂ ಸಮಸ್ಯೆಗಳನ್ನು ಆದ್ಯತೀಕರಿಸುವಮೂಲಕ ಗುರಿಯನ್ನು ನಿಗದಿಪಡಿಸುವುದು. ಈ ಗುರಿಯನ್ನು ನಿಗದಿಪಡಿಸಲು ಕೆಲವೊಂದು ಉದಾಹರಣೆಗಳನ್ನು ನೀಡಲಾಗಿದ್ದು ಅವುಗಳನ್ನು ಗಮನಿಸಬಹುದು.

ಅನಸಾರಾಗ್ರಾ&ಪಂರಾಸಂ

ಗುರಿ ನಿಗದಿಪಡಿಸಿದ ನಂತರ ಗ್ರಾಮಪಂಚಾಯಿತಿಯು ಸದರಿ ಗುರಿಗಳನ್ನು ಸಾಧಿಸಲು ಅಗತ್ಯವಿರುವ ಕಾಲವಕಾಶವನ್ನು ನಿಗದಿಪಡಿಸುವುದು. ಉದಾಹರಣೆಗೆ:- ಸರ್ಕಾರದ ಆರೋಗ್ಯ ವಿಮಾಯೋಜನೆಯನ್ನು ಗ್ರಾಮದ ಎಲ್ಲಾ ಅರ್ಹಫಲನುಭವಿಗಳಿಗೆ ಒದಗಿಸುವುದು ಇದು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿರುವುದರಿಂದ ಶೀಘ್ರವಾಗಿ ಅನುಷ್ಠಾನಿಸಬೇಕಾಗುತ್ತದೆ. ಮತ್ತೊಂದು ಸಮಸ್ಯೆಯನ್ನು ಗುರುತಿಸುವುದಾದರೆ, ವಸತಿರಹಿತರಿಗೆ ವಿವಿಧ ವಸತಿ ಯೋಜನೆಯಡಿ ವಸತಿಯನ್ನು ಕಲ್ಪಿಸುವುದು.ಈ ಸಮಸ್ಯೆಯುನ್ನು ಬಗೆಹರಿಸಬೇಕಾದರೆ ದೀರ್ಘಾವಾದಿ ಗುರಿಯನ್ನು ನಿಗದಿಪಡಿಸಿ ಪ್ರತಿವರ್ಷ ವಸತಿರಹಿತರಿಗೆ ವಸತಿಕಲ್ಪಿ ಸಬೇಕಾಗುತ್ತದೆ. ಹೀಗೆ ಗುರಿಯನ್ನು ನಿಗದಿಪಡಿಸುವಾಗ ಸಮಸ್ಯೆಯನ್ನು ಗಮನದಲ್ಲಿಟ್ಟು ಕೊಂಡು ಶೀಘ್ರ, ಅಲ್ಪಾವದಿ,(1ವರ್ಷ) ಮಧ್ಯಮವಾದಿ( 3 ವರ್ಷ)

ಮತ್ತು ದೀರ್ಘಾವಾದಿಯಾಗಿ ( 5 ವರ್ಷ) ವಿಂಗಡಿಸಿಕೊಂಡು ಗುರಿಸಾಧಿಸಲು ಅಗತ್ಯ ಚಟುವಟಿಕೆಗಳನ್ನು ಪಟ್ಟಿ ಮಾಡಿ ಅವುಗಳನ್ನು ಅನುಷ್ಠಾನಗೊಳಿಸಲು ಯೋಜನೆಯನ್ನು ರೂಪಿಸಬೇಕು.

ಗ್ರಾಮಗಳನ್ನು ಸಾಮಾಜಿಕವಾಗಿ ಸುರಕ್ಷಿತವಾಗಿಸಲು ಉಪ ತಹಶೀಲ್ದಾರ್, ಕಂದಾಯ ನಿರಿಕ್ಷಕರು, ಗ್ರಾಮ ಲೆಕ್ಕಧಿಕಾರಿಗಳು, ಸ್ಥಳೀಯ ಪೊಲೀಸ್ಠಾಣೆಯ ಬೀಟ್ಪೊಲೀಸ್, ವಿವಿದ್ಧೋದೇಶ ಪುನರ್ವಸತಿಕಾರ್ಯಕರ್ತರು ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರುಗಳನ್ನು ತರಬೇತಿಯ ಭಾಗವಾಗಿ ಪರಿಗಣಿಸಲಾಗಿದೆ. ನಂತರದಲ್ಲಿ ಗ್ರಾಮಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮಗಳನ್ನು ಸಾಮಾಜಿಕವಾಗಿ ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಿ ಗ್ರಾಮದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ರಕ್ಷಣೆ ಮತ್ತು ಅರ್ಹಫಲನುಭವಿಗಳನ್ನು ಸಾಮಾಜಿಕಾ ಭದ್ರತಾ ಯೊಜನೆಯನ್ನು ಒದಗಿಸುವ ಮೂಲಕ ಸುರಕ್ಷಿತಾಗ್ರಾಮಗಳನ್ನಾಗಿ ಮಾಡೋಣ.

ಅನಸಾರಾಗ್ರಾ&ಪಂರಾಸಂ